# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-3706/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 25/5/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ.ಕೆ.ಬಿ.ನಾಗೇಶ್‌ಬಾಬು, ಕಾರ್ಯದರ್ಶಿ, ಆನೂರು ಗ್ರಾಮ ಪಂಚಾಯಿತಿ, (2) ಶ್ರೀ.ಆರ್.ನಾಗರಾಜ್, ಹಿಂದಿನ ಕಾರ್ಯದರ್ಶಿ, ಆನೂರು ಗ್ರಾಮ ಪಂಚಾಯಿತಿ (ಹಾಲಿ ನಿವೃತ್ತ), (3) ಶ್ರೀ.ಎಂ.ವೆಂಕಟರೆಡ್ಡಿ, ಅಧ್ಯಕ್ಷರು, ಆನೂರು ಗ್ರಾಮ ಪಂಚಾಯಿತಿ, ಮತ್ತು (4) ಶ್ರೀ.ಹೆಚ್.ಸಿ.ಆಂಜಪ್ಪ, ಅಧ್ಯಕ್ಷರು, ಆನೂರು ಗ್ರಾಮ ಪಂಚಾಯಿತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ವಿರುದ್ಧದ ನಡವಳಿ ಕುರಿತು.

******

1. ಶ್ರೀ.ನಾರಾಯಣಸ್ವಾಮಿ ಎಂ ಬಿನ್ ಮುನಿಶಾಮಪ್ಪ, ಪಣಸಚೌಡನಹಳ್ಳಿ, ಆನೂರು ಗ್ರಾಮ ಪಂಚಾಯಿತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ.ಕೆ.ಬಿ.ನಾಗೇಶ್‌ಬಾಬು, ಕಾರ್ಯದರ್ಶಿ, ಆನೂರು ಗ್ರಾಮ ಪಂಚಾಯಿತಿ, (2) ಶ್ರೀ.ಆರ್.ನಾಗರಾಜ್, ಹಿಂದಿನ ಕಾರ್ಯದರ್ಶಿ, ಆನೂರು ಗ್ರಾಮ ಪಂಚಾಯಿತಿ (ಹಾಲಿ ನಿವೃತ್ತ), (3) ಶ್ರೀ.ಎಂ.ವೆಂಕಟರೆಡ್ಡಿ, ಅಧ್ಯಕ್ಷರು, ಆನೂರು ಗ್ರಾಮ ಪಂಚಾಯಿತಿ, ಮತ್ತು (4) ಶ್ರೀ.ಹೆಚ್.ಸಿ.ಆಂಜಪ್ಪ, ಅಧ್ಯಕ್ಷರು, ಆನೂರು ಗ್ರಾಮ ಪಂಚಾಯಿತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಚಿಂತಾಮಣಿ ತಾಲ್ಲೂಕು, ಅನೂರು ಗ್ರಾಮ ಪಂಚಾಯಿತಿಯ ಪಣಸಚೌಡನಹಳ್ಳಿ ಗ್ರಾಮದಲ್ಲಿ ಅನಧಿಕೃತವಾಗಿ ಹೌಸ್‌ಲಿಸ್ಟ್ ವಹಿಯಲ್ಲಿ ತಿದ್ದುಪಡಿ ಮಾಡಿದ್ದು, ಆ ಬಗ್ಗೆ ಗ್ರಾಮ ಪಂಚಾಯಿತಿಯಿಂದ ದಾಖಲೆಗಳಿಗಾಗಿ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಿದರೂ ಸಹ ಮಾಹಿತಿಯನ್ನು ನೀಡಿರುವುದಿಲ್ಲ. ಹೌಸ್‌ಲಿಸ್ಟ್ ದಾಖಲೆಗಳನ್ನು ಸರಿಪಡಿಸುವಂತೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಪತ್ರ ಸಂ.ತಾ.ಪಂ.ಚಿ/ನಿವೇಶನ/ತಕರಾರು/ ಸಿಆರ್/2011-12 ದಿ.13/1/12 ರಂತೆ ಎದುರುದಾರರಿಗೆ ಆದೇಶಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂಬ ಆಪಾದನೆ ಮಾಡಿ ದೂರು ಸಲ್ಲಿಸಿರುತ್ತಾರೆ.

3. ದೂರುದಾರರು ದೂರಿನ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದೂರುದಾರರ ಮನವಿಯಂತೆ ಆನೂರು ಗ್ರಾಮಪಂಚಾಯಿತಿಯ ಅಧ್ಯಕ್ಷರು ಮತ್ತು

ಸದಸ್ಯರೊಂದಿಗೆ ಹೌಸ್‌ಲಿಸ್ಟ್ ತಿದ್ದುಪಡಿ ಬಗ್ಗೆ ಚರ್ಚಿಸಿದ್ದು, ಪಣಸಚೌಡನಹಳ್ಳಿ ಗ್ರಾಮದ ಹೌಸ್‌ಲಿಸ್ಟ್ ತಯಾರಿಸುವ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮತಿ ಪಡೆದು ವ್ಯಾಪಕ ಪ್ರಚಾರ ಮಾಡಿ ಖಾತೆದಾರರ ಸಮ್ಮುಖದಲ್ಲಿ ಗ್ರಾಮದ ಖಾತೆಯನ್ನು ಸರಿಪಡಿಸಿ ಖಾತೆದಾರರ ಹೆಸರಿಗೆ ಗ್ರಾಮಠಾಣಾ ಪ್ರದೇಶದಲ್ಲಿರತಕ್ಕ ಸ್ವತ್ತುಗಳಿಗೆ ಅಳತೆ ಮತ್ತು ಚೆಕ್ಕುಬಂದಿ ಗುರ್ತಿಸಿ ಆಕ್ಷೇಪಣೆಗಾಗಿ ಪ್ರಕಟಿಸಲಾಗಿದ್ದು, ನಿಗದಿತ ಕಾಲಾವಧಿಯಲ್ಲಿ ಬಂದ ಆಕ್ಷೇಪಣೆಗಳನ್ನು ಗ್ರಾಮಪಂಚಾಯಿತಿ ಆಡಳಿತ ಮಂಡಳಿ ಮತ್ತು ಕಾರ್ಯದರ್ಶಿಗಳು ಪರಿಶೀಲಿಸಿ ತಿದ್ದುಪಡಿ ಮಾಡಿ, ವ್ಯಾಪಕ ಪ್ರಚಾರ ನಡೆಸಿ, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರ ಅನುಮೋದನೆ ಮೇರೆಗೆ ಹೌಸ್‌ಲಿಸ್ಟ್ ವಹಿಯಲ್ಲಿ ಎಚ್.ಎಲ್.ಸಂಖ್ಯೆ, ಸ್ವತ್ತಿನ ಮಾಲೀಕರ ಹೆಸರು, ಅಳತೆ ಮತ್ತು ಚೆಕ್ಕುಬಂದಿಗಳನ್ನು ನಮೂದಿಸಿ ಗ್ರಾಮಪಂಚಾಯಿತಿಯಿಂದ ಮಂಜೂರಾತಿ ಪಡೆದಿದೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯಿತಿಯ ಪತ್ರ ಸಂ.397/2007-08 ದಿ.6/12/08 ರಂತೆ ನಿವೇಶನಗಳನ್ನು ಮಂಜೂರು ಮಾಡುವ ಬಗ್ಗೆ ಪತ್ರವನ್ನು ಗ್ರಾಮಪಂಚಾಯಿತಿಗೆ ನೀಡಿದ್ದು, ಅದರಂತೆ ಅಗತ್ಯ ಕ್ರಮ ಕೈಗೊಂಡಿರುತ್ತದೆ. ಆ ಸಂದರ್ಭದಲ್ಲಿ ದೂರುದಾರರು ಗ್ರಾಮಪಂಚಾಯಿತಿಗೆ ತಿದ್ದುಪಡಿ ವ್ಯತ್ಯಾಸಕ್ಕಾಗಿ ಪತ್ರ ನೀಡಿರುವುದಿಲ್ಲ. ಗ್ರಾಮಪಂಚಾಯಿತಿಯ ಮಾಸಿಕ ಸಭೆಯಲ್ಲಿ ದೂರುದಾರರ ಹೆಸರಿಗೆ ತಿದ್ದುಪಡಿ ಮಾಡಲು ಆಡಳಿತ ಮಂಡಳಿಯಿಂದ ಅನುಮೋದನೆ ನೀಡಿರುವುದಿಲ್ಲ. ದೂರುದಾರರಿಗೆ ಸೂಕ್ತ ದಾಖಲೆಗಳು ಇದ್ದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 269 ರಡಿಯಲ್ಲಿ ಮೇಲ್ಮನವಿಯನ್ನು ದಾಖಲಿಸಲು ಅವಕಾಶವಿದೆಯೆಂದು ಹೇಳಿರುತ್ತಾರೆ.

4. ದೂರುದಾರರು ತನ್ನ ಪ್ರತ್ಯುತ್ತರದಲ್ಲಿ ಖಾತೆ ನಂ.234, 231, 230, 232, 220, 227, 228, 236, 238 ಖಾತೆಗಳೆಲ್ಲವೂ ಅಕ್ರಮ ಖಾತೆಗಳಾಗಿದ್ದು, ಸರ್ಕಾರಿ ಹುಣಸೆ ಮರಗಳನ್ನು ಸಹ ಖಾತೆಗಳಲ್ಲಿ ಸೇರ್ಪಡಿಯಾಗಿದ್ದು, ಅಧ್ಯಕ್ಷರ ಸಹಿ ಕೂಡ ತಿದ್ದುಪಡಿಯಾಗಿರುತ್ತದೆ. ಎಂ.ನಾರಾಯಣಸ್ವಾಮಿ ಎಂಬುವರು 2013 ರಲ್ಲಿ ಗ್ರಾಮಪಂಚಾಯಿತಿಯ ಸದಸ್ಯರಾಗಿದ್ದು, 2015 ರಿಂದ ಅವರ ಪತ್ನಿ ಶ್ರೀಮತಿ.ನಾಗರತ್ನಮ್ಮ ಎಂಬುವರು ಪಂಚಾಯಿತಿಯ ಅಧ್ಯಕ್ಷಾಗಿದ್ದು, ಖಾತೆ ನಂ.6 ರಲ್ಲಿ 105 ಎನ್ನುವುದನ್ನು 185 ಅಡಿಗಳೆಂದು ತಿದ್ದಿರುತ್ತಾರೆಂದು ಹೇಳಿರುತ್ತಾರೆ.

5. ದೂರುದಾರರು ತನ್ನ ದೂರಿನ ಜೊತೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಚಿಂತಾಮಣಿ ಇವರ ಜ್ಞಾಪನದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಸದರಿ ಜ್ಞಾಪನದ ಪ್ರಕಾರ ಕಾರ್ಯನಿರ್ವಾಹಕ ಅಧಿಕಾರಿಗಳು ಅನೂರು ಗ್ರಾಮಪಂಚಾಯಿತಿಗೆ ಸಂಬಂಧಪಟ್ಟಂತೆ ಅಕ್ರಮ ಖಾತೆಗಳ ಬಗ್ಗೆ ಗ್ರಾಮಸಭೆಯಲ್ಲಿ ಮಂಡಿಸಿ ಕ್ರಮ ಕೈಗೊಳ್ಳಲು ಸೂಚಿಸಿರುವುದು ಕಂಡುಬರುತ್ತದೆ. ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರುದಾರರ ಕೋರಿಕೆಯಂತೆ ತಿದ್ದುಪಡಿ ಮಾಡುವ ಪ್ರಕರಣವನ್ನು ಗ್ರಾಮಪಂಚಾಯಿತಿ ಅಧ್ಯಕ್ಷರು ತಡೆಹಿಡಿದಿರುತ್ತಾರೆಂದು ಹೇಳಿರುವುದು ಕಂಡುಬರುತ್ತದೆ. ಮೇಲಿನ ಅಂಶಗಳನ್ನು ಗಮನಿಸಿದಾಗ ಕಾರ್ಯನಿರ್ವಾಹಕ ಅಧಿಕಾರಿಯ ಜ್ಞಾಪನದ ಪ್ರಕಾರ ಎದುರುದಾರರು ಕ್ರಮವನ್ನು ಕೈಗೊಂಡಿದ್ದಾರೋ ಇಲ್ಲವೋ ಎನ್ನುವುದನ್ನು ತಿಳಿಯಲು ಸಾಧ್ಯವಿಲ್ಲ. ಅಲ್ಲದೆ ಖಾತಾವನ್ನು ತಿದ್ದುಪಡಿ ಮಾಡಲಾಗಿದೆಯೆಂದು ಕೂಡ ದೂರುದಾರರು ಆಪಾದಿಸಿರುವುದರಿಂದ ದೂರುದಾರರ

ದೂರಿನ ಬಗ್ಗೆ ಸೂಕ್ತ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಂತಾಮಣಿ ಇವರಿಗೆ ಆದೇಶಿಸಲಾಗಿತ್ತು.

6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಂತಾಮಣಿ ಇವರು ವರದಿಯನ್ನು ನೀಡಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಿರುವುದು ಕಂಡುಬರುತ್ತದೆ.

i. ದೂರಿನಲ್ಲಿ ದಾಖಲಿಸಿರುವ ಖಾತೆ ಸಂ.234 ರ ಬಗ್ಗೆ ಪರಿಶೀಲಿಸಿದಾಗ ಪೂ.ಪ.31 ಅಡಿ ಉ.ದ.55 ಅಡಿ ಇದ್ದು ಇದಕ್ಕೆ ಚೆಕ್ಕುಬಂದಿ ಪೂರ್ವಕ್ಕೆ–ರಸ್ತೆ, ಪಶ್ಚಿಮಕ್ಕೆ–ಗೋಪಾಲಕೃಷ್ಣಪ್ಪನವರ ಸ್ವತ್ತು, ಉತ್ತರಕ್ಕೆ–ಕವಿತಮ್ಮ ಮತ್ತು ದಕ್ಷಿಣಕ್ಕೆ–ರಸ್ತೆ, ಕೃಷ್ಣಪ್ಪ ಮತ್ತು ಮುನಿವೆಂಕಟಪ್ಪರವರ ಸ್ವತ್ತು ಎಂಬುದಾಗಿ ಸ್ಥಳ ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. ಸದರಿ ಸ್ವತ್ತು ಎಂ.ನಂಜುಂಡಪ್ಪ ಬಿನ್ ಮುನಿನಾಸಪ್ಪರವರ ಹೆಸರಿನಲ್ಲಿದ್ದು ಮುನಿವೆಂಕಟಪ್ಪ ಬಿನ್ ಲೇಟ್ ಮುನಿಯಪ್ಪ ರವರಿಂದ ಕ್ರಯವಾಗಿರುತ್ತದೆ ಹಾಗೂ ಕ್ರಯಪತ್ರ ನೀಡಿರುತ್ತಾರೆ. ಸ್ಥಳ ಪರಿಶೀಲನೆಗೂ ಮತ್ತು ಗ್ರಾಮಪಂಚಾಯಿತಿ ದಾಖಲೆಗಳಿಗೂ ತಾಳೆ ಇರುತ್ತದೆ.

ii. ದೂರಿನಲ್ಲಿ ದಾಖಲಿಸಿರುವ ಖಾತೆ ಸಂ.231 ರ ಬಗ್ಗೆ ಪರಿಶೀಲಿಸಿದಾಗ, ಗ್ರಾಮಪಂಚಾಯಿತಿ ಕಚೇರಿಯಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನೀಡಿರುವ ದಾಖಲೆಯಲ್ಲಿ ಎನ್.ಶ್ರೀನಿವಾಸಗೌಡ ಬಿನ್ ಎಂ.ನಾರಾಯಣಸ್ವಾಮಿ ಎಂಬುವವರ ಹೆಸರಿನಲ್ಲಿರುತ್ತದೆ. ಎನ್.ಶ್ರೀನಿವಾಸಗೌಡ ಎಂಬುದನ್ನು ತಿದ್ದಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಪೂರ್ವಕ್ಕೆ–ನಾರೆಪ್ಪನಾಯಕ, ಪಶ್ಚಿಮಕ್ಕೆ–ಕಮಲಮ್ಮ, ಉತ್ತರಕ್ಕೆ–ಜಿ.ಪಂ.ರಸ್ತೆ ಮತ್ತು ದಕ್ಷಿಣಕ್ಕೆ–ರಸ್ತೆ ಮತ್ತು ಬೈಚಮ್ಮ ಚೆಕ್ಕುಬಂದಿ ಇರುತ್ತದೆ. ಆದರೆ ಎನ್.ಶ್ರೀನಿವಾಸಗೌಡ ಬಿನ್ ಎಂ.ನಾರಾಯಣಸ್ವಾಮಿ ಪಣಸಚೌಡನಹಳ್ಳಿ ರವರು ಅಧ್ಯಕ್ಷರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅನೂರು ಗ್ರಾಮಪಂಚಾಯಿತಿ ಇವರಿಗೆ ಮನವಿ ನೀಡಿ ಸುಮಾರು ವರ್ಷಗಳಿಂದ ಸ್ವಅನುಭವದಲ್ಲಿ ಇರುವ ನಿವೇಶನವನ್ನು ಖಾತೆ ಮಾಡಿಕೊಡಲು ಕೋರಿರುತ್ತಾರೆ. ಅದರಂತೆ ದಿ.5/12/2011 ರಲ್ಲಿ ನಡೆದ ಸಾಮಾನ್ಯ ಸಭೆಯ ವಿಷಯ ಸಂ.04 ರಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳಲ್ಲಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಮೂಡಚಿಂತಲಹಳ್ಳಿ, ಪಣಸಚೌಡನಹಳ್ಳಿ, ದೊಡ್ಡಬೊಮ್ಮನಹಳ್ಳಿ ಮತ್ತು ಅನೂರು ಗ್ರಾಮಗಳ ವಾಸಿಗಳಾದ (1) ನಾರಾಯಣಪ್ಪ ಬಿನ್ ಹನುಮಂತನಾಯಕ (2) ಮಂಜುನಾಥ ಬಿನ್ ನಾರಾಯಣಪ್ಪ (3) ಕೃಷ್ಣಪ್ಪ ಬಿನ್ ಗಂಗಪ್ಪ (4) ಎಂ.ನಾರಾಯಣಸ್ವಾಮಿ ಬಿನ್ ಮುನಿನಾಸಪ್ಪ (5) ಎನ್.ಶ್ರೀನಿವಾಸಗೌಡ ಬಿನ್ ನಾರಾಯಣಸ್ವಾಮಿ (6) ಮಂಜುಳಮ್ಮ ಕೋಂ ಈಶ್ವರಪ್ಪ ಮತ್ತು (7) ವೀರಭದ್ರಪ್ಪ ಬಿನ್ ಪಾಪಣ್ಣ ಎಂಬುವವರು ಗ್ರಾಮಪಂಚಾಯಿತಿಗೆ ಅರ್ಜಿ ಸಲ್ಲಿಸಿ ಸ್ವಅನುಭವದಲ್ಲಿರುವ ನಿವೇಶನಗಳನ್ನು ಖಾತೆ ಮಾಡಿಕೊಡಲು ಕೋರಿರುತ್ತಾರೆ. ಆದ್ದರಿಂದ, ಈ ಅರ್ಜಿಗಳನ್ನು ಪರಿಶೀಲಿಸಿ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರ ಸಮ್ಮುಖದಲ್ಲಿ ಮಹಜರ್‌ನ್ನು ನಡೆಸಿ ಖಾತೆ ಮಾಡಿಕೊಡಲು ತೀರ್ಮಾನಿಸಿರುತ್ತಾರೆ.

ಆದರೆ, ಮೇಲ್ಕಂಡ ಸಾಮಾನ್ಯ ಸಭೆಯ ದಿ.5/12/2011 ರ ನಂತರ ಸ್ಥಳ ಪರಿಶೀಲನೆ ಮಾಡಿ ಖಾತೆ ಮಾಡಿಕೊಡಬೇಕಾಗಿರುತ್ತದೆ. ಆದರೆ ದಿ.6/4/2011 ರಲ್ಲೆ ಅಂದರೆ 8 ತಿಂಗಳ ಮುಂಚಿತವಾಗಿಯೇ ಸಭೆಯಲ್ಲಿ ಚರ್ಚಿಸುವ ಮುನ್ನವೇ ಸ್ಥಳ ಪರಿಶೀಲನೆ ಮಾಡಿ ಮಹಜರ್ ಕ್ರಮ ಜರುಗಿಸಿರುವುದರಿಂದ ದಾಖಲೆಗಳು ಒಂದಕ್ಕೊಂದು ತಾಳೆಯಾಗದಿರುವುದು ಕಂಡುಬಂದಿರುತ್ತದೆ.

iii. ದೂರಿನಲ್ಲಿ ದಾಖಲಿಸಿರುವ ಖಾತೆ ಸಂ.232 ರ ಬಗ್ಗೆ ಪರಿಶೀಲಿಸಿದಾಗ, ಮಂಜುಳಮ್ಮ ಕೋಂ ಈಶ್ವರಪ್ಪ ರವರ ಹೆಸರಿನಲ್ಲಿದ್ದು ಪೂ.ಪ. ಪೂರ್ವದಕಡೆ–40 ಪಶ್ಚಿಮದಕಡೆ–35 ಮತ್ತು ಉ.ದ, ಉತ್ತರದ ಕಡೆ–18 ದಕ್ಷಿಣದ ಕಡೆ 30 ಅಡಿಗಳಿದ್ದು, ಇದಕ್ಕೆ ಚೆಕ್ಕುಬಂದಿ ಪೂರ್ವಕ್ಕೆ–ರಸ್ತೆ, ಪಶ್ಚಿಮಕ್ಕೆ–ಗೋವಿಂದಪ್ಪ, ಉತ್ತರಕ್ಕೆ–ರಸ್ತೆ ಮತ್ತು ದಕ್ಷಿಣಕ್ಕೆ–ಮುನಿಶಾಮಿ ಸದರಿ

ಖಾತೆಯನ್ನು ಸ್ವಅನುಭವದಂತೆ ಖಾತೆ ಮಾಡಿರುವುದಾಗಿ ಪರಿಶೀಲನಾ ಸಮಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆನೂರು ಗ್ರಾಮ ಪಂಚಾಯಿತಿರವರು ತಿಳಿಸಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಕಂಡ ಸಾಮಾನ್ಯ ಸಭೆಯ ದಿ.5/12/11 ರ ನಂತರ ಸ್ಥಳ ಪರಿಶೀಲನೆ ಮಾಡಿ ಖಾತೆ ಮಾಡಿಕೊಡಬೇಕಾಗಿರುತ್ತದೆ. ಆದರೆ ದಿ.6/4/11 ರಲ್ಲೆ ಅಂದರೆ 8 ತಿಂಗಳ ಮುಂಚಿತವಾಗಿಯೇ ಸಭೆಯಲ್ಲಿ ಚರ್ಚಿಸುವ ಮುನ್ನವೇ ಸ್ಥಳ ಪರಿಶೀಲನೆ ಮಾಡಿ ಮಹಜರ್ ಕ್ರಮ ಜರುಗಿಸಿರುವುದರಿಂದ ದಾಖಲೆಗಳು ಒಂದಕ್ಕೊಂದು ತಾಳೆಯಾಗದಿರುವುದು ಕಂಡುಬಂದಿರುತ್ತದೆ.

iv. ದೂರಿನಲ್ಲಿ ದಾಖಲಿಸಿರುವ ಖಾತೆ ಸಂ.236 ರ ಬಗ್ಗೆ ಪರಿಶೀಲಿಸಿದಾಗ ಮುನಿರಾಜು ಬಿನ್ ನಾರಾಯಣಪ್ಪ ಎಂಬುವರ ಹೆಸರಿನಲ್ಲಿದ್ದು ಪೂ.ಪ.–40 ಉ.ದ.–30 ಅಡಿಗಳಿದ್ದು, ಇದಕ್ಕೆ ಚೆಕ್ಕುಬಂದಿ ಪೂರ್ವಕ್ಕೆ–ಸ್ವಂತ ಖಾಲಿಜಾಗ, ಪಶ್ಚಿಮಕ್ಕೆ–12 ಅಡಿ ರಸ್ತೆ, ಉತ್ತರಕ್ಕೆ–ಸ್ವಂತ ಖಾಲಿ ಜಾಗ ಮತ್ತು ದಕ್ಷಿಣಕ್ಕೆ–ಸ್ವಂತ ಖಾಲಿ ಜಾಗ ಎಂದು ನಮೂದಿಸಿರುತ್ತಾರೆ. ಸದರಿ ಖಾತೆಯನ್ನು ಸ್ವಅನುಭವದಂತೆ ಖಾತೆ ಮಾಡಿರುವುದಾಗಿ ಪರಿಶೀಲನಾ ಸಮಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆನೂರು ಗ್ರಾಮಪಂಚಾಯಿತಿರವರು ವರದಿಯಲ್ಲಿ ಮತ್ತು ಸ್ಥಳ ಪರಿಶೀಲನಾ ಸಮಯದಲ್ಲಿ ತಿಳಿಸಿರುತ್ತಾರೆ. ಗ್ರಾಮಪಂಚಾಯಿತಿ ದಾಖಲೆಗಳನ್ನು ಪರಿಶೀಲಿಸಿದಾಗ, ಮುನಿರಾಜು ಬಿನ್ ನಾರಾಯಣಶೆಟ್ಟಿ ಎಂಬುವರು ನಿವೇಶನ ಮಂಜೂರು ಮಾಡಲು ಅರ್ಜಿ ನೀಡಿರುತ್ತಾರೆ. ಆದರೆ ದಿ.18/12/13 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಮುನಿರಾಜು ಬಿನ್ ನಾರಾಯಣಪ್ಪ ರವರ ಬದಲು ಮುನಿರಾಜು ಬಿನ್ ನರಸಿಂಹಪ್ಪ ಎಂದು ನಮೂದಾಗಿರುತ್ತದೆ. ಆನಂತರ ದಿ.6/5/14 ರಂದು ಮಹಜರ್ ಕ್ರಮ ಜರುಗಿಸಿ ಖಾತೆ ಮಾಡಿರುವುದು ಕಂಡುಬಂದಿರುತ್ತದೆ.

v. ದೂರಿನಲ್ಲಿ ದಾಖಲಿಸಿರುವ ಖಾತೆ ಸಂ.238 ರ ಬಗ್ಗೆ ಪರಿಶೀಲಿಸಿದಾಗ ಸದರಿ ಖಾತೆಯು ಜಿ.ಲಕ್ಷ್ಮಿ ಕೋಂ ಮುನಿರಾಜು ರವರ ಹೆಸರಿನಲ್ಲಿದ್ದು ಪೂ.ಪ.–40 ಉ.ದ.–30 ಅಡಿಗಳಿದ್ದು, ಇದಕ್ಕೆ ಚೆಕ್ಕುಬಂದಿ ಪೂರ್ವಕ್ಕೆ–ಸರ್ಕಾರಿ ಜಾಗ, ಪಶ್ಚಿಮಕ್ಕೆ–ರಸ್ತೆ, ಉತ್ತರಕ್ಕೆ–ಖಾಲಿಜಾಗ ಮತ್ತು ದಕ್ಷಿಣಕ್ಕೆ–ರಸ್ತೆ ಇದ್ದು, ಸದರಿ ಖಾತೆಯನ್ನು ಸ್ವಅನುಭವದಂತೆ ಖಾತೆ ಮಾಡಿರುವುದಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆನೂರು ಗ್ರಾಮಪಂಚಾಯಿತಿರವರು ತಿಳಿಸಿರುತ್ತಾರೆ. ಆದರೆ ಸ್ಥಳ ಪರಿಶೀಲನಾ ಸಮಯದಲ್ಲಿ ಸದರಿ ಸ್ವತ್ತಿನಲ್ಲಿ ಅರಳೀಮರ ಇರುವುದು ಕಂಡುಬಂದಿರುತ್ತದೆ. ಈ ಅರಳೀ ಮರದ ಬಗ್ಗೆ ಹೌಸ್‌ಲಿಸ್ಟ್ ವಹಿಯಲ್ಲಿ ನಮೂದಿಸಿರುವುದಿಲ್ಲ. ಖಾತೆ ಸಂ.236 ಗಂಡನ ಹೆಸರಿನಲ್ಲಿದ್ದು ಖಾತೆ ಸಂ.238 ಹೆಂಡತಿ ಹೆಸರಿನಲ್ಲಿರುತ್ತದೆ. ಒಂದೇ ಕುಟುಂಬದ ಇಬ್ಬರು ಅಂದರೆ ಗಂಡ ಮತ್ತು ಹೆಂಡತಿ ಹೆಸರಿಗೆ ಖಾತೆ ಮಾಡಿರುವುದು ಕಂಡುಬಂದಿರುತ್ತದೆ.

vi. ದೂರಿನಲ್ಲಿ ದಾಖಲಿಸಿರುವ ಖಾತೆ ಸಂ.228 ರ ಬಗ್ಗೆ ಪರಿಶೀಲಿಸಿದಾಗ, ಸದರಿ ಖಾತೆಯು ಮಂಜುನಾಥ ಬಿನ್ ಚೆನ್ನರಾಯಪ್ಪ ರವರ ಹೆಸರಿನಲ್ಲಿದ್ದು, ಪೂ.ಪ.–40 ಉ.ದ.–30 ಅಡಿಗಳಿದ್ದು, ಇದಕ್ಕೆ ಚೆಕ್ಕುಬಮದಿ ಪೂರ್ವಕ್ಕೆ–ಗೋಪಾಲಕೃಷ್ಣ, ಪಶ್ಚಿಮಕ್ಕೆ–ಅಶ್ವಥನಾರಾಯಣಗೌಡ, ಉತ್ತರಕ್ಕೆ–ರಸ್ತೆ ಮತ್ತು ದಕ್ಷಿಣಕ್ಕೆ–ಮುನಿವೆಂಕಟಪ್ಪ ಇರುತ್ತದೆ. ಗ್ರಾಮಪಂಚಾಯಿತಿ ದಾಖಲೆಗಳ ಪ್ರಕಾರ ದಿ.6/2/2009 ರಂದು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ ಖಾತೆ ಮಾಡಲು ತೀರ್ಮಾನಿಸಿರುತ್ತಾರೆ. ಅದರಂತೆ ದಿ.10/12/2009 ರಂದು ಮಹಜರ್ ಕ್ರಮ ಜರುಗಿಸಿರುವುದು ಸ್ಥಳ ಪರಿಶೀಲನಾ ಸಮಯದಲ್ಲಿ ಗ್ರಾಮಪಂಚಾಯಿತಿ ದಾಖಲೆಗಳು ತಾಳೆಯಾಗಿರುವುದು ಕಂಡುಬಂದಿರುತ್ತದೆ. ಸದರಿ ಸ್ವತ್ತಿನಲ್ಲಿ ಬೇವಿನ ಮರ ಇರುವುದು ದಾಖಲೆಗಲನ್ನು ನಮೂದಿಸಿರುವುದಿಲ್ಲ.

vii. ದೂರಿನಲ್ಲಿ ದಾಖಲಿಸಿರುವ ಖಾತೆ ಸಂ.220 ರ ಬಗ್ಗೆ ಪರಿಶೀಲಿಸಿದಾಗ, ಸದರಿ ಖಾತೆಯು ಎಂ.ನಾರಾಯಣಸ್ವಾಮಿ ಬಿನ್ ಮುನಿನಾಸಪ್ಪ ಎಂಬುವರ ಹೆಸರಿನಲ್ಲಿದ್ದು, ಪೂ.ಪ.–15 ಉ.ದ.–50 ಅಡಿಗಳು ಎಂದು ಇರುತ್ತದೆ. ದಾಖಲೆಗಳನ್ನು ಪರಿಶೀಲಿಸಿದಾಗ, ದಿ.15/12/2011

ರಂದು ನಡೆದ ಸಾಮಾನ್ಯ ಸಭೆಯಲ್ಲಿ ವಿಷಯ ಸಂ.4 ರಲ್ಲಿ ಎಂ.ನಾರಾಯಣಸ್ವಾಮಿ ಬಿನ್ ಮುನಿನಾಸಪ್ಪ ಎಂಬುದಾಗಿ ನಮೂದಾಗಿರುತ್ತದೆ. ಆದರೆ ದಿ.6/4/2011 ರಲ್ಲೆ 8 ತಿಂಗಳ ಮುಂಚಿತವಾಗಿಯೇ ಮಹಜರ್ ನಡೆಸಿರುವುದು ಕಂಡುಬಂದಿರುತ್ತದೆ. ಮಹಜರ್‌ನಲ್ಲಿ ಪೂ.ಪ.50 ಉ.ದ.15 ಎಂದು ನಮೂದಿಸಿರುತ್ತಾರೆ. ಆದರೆ ಗ್ರಾಮಪಂಚಾಯಿತಿಯ ಹೌಸ್‌ಲಿಸ್ಟ್ ವಹಿಯಲ್ಲಿ ಪೂ.ಪ.15 ಉ.ದ.50 ಎಂಬುದಾಗಿ ಅದಲು ಬದಲಾಗಿ ನಮೂದಿಸಿರುವುದು ಕಂಡುಬಂದಿರುತ್ತದೆ.

viii. ದೂರಿನಲ್ಲಿ ದಾಖಲಿಸಿರುವ ಖಾತೆ ಸಂ.227 ರ ಬಗ್ಗೆ ಪರಿಶೀಲಿಸಿದಾಗ, ಸದರಿ ಖಾತೆಯು ಗೋಪಾಲಕೃಷ್ಣ ಬಿನ್ ಚೆನ್ನರಾಯಪ್ಪರವರ ಹೆಸರಿನಲ್ಲಿ ಇರುತ್ತದೆ. ಪೂ.ಪ.40 ಉ.ದ.30 ಅಡಿಗಳಿದ್ದು, ಇದಕ್ಕೆ ಚೆಕ್ಕುಬಂದಿ ಪೂರ್ವಕ್ಕೆ-ಮುನಿವೆಂಕಟಪ್ಪ, ಪಶ್ಚಿಮಕ್ಕೆ-ಮಂಜುನಾಥ, ಉತ್ತರಕ್ಕೆ-ರಸ್ತೆ, ದಕ್ಷಿಣಕ್ಕೆ-ಮುನಿವೆಂಕಟಪ್ಪ ಇದ್ದು, ಸದರಿ ಸ್ವತ್ತನ್ನು ಸ್ವಅನುಭವದಂತೆ ಖಾತೆ ಮಾಡಿರುವುದಾಗಿ ದಿ.6/2/2009 ರಂದು ನಡೆದ ಸಾಮಾನ್ಯ ಸಭೆಯ ನಡಾವಳಿಯಲ್ಲಿ ನಮೂದಿಸಿರುತ್ತಾರೆ. ನಂತರ ದಿ.10/12/2009 ರಲ್ಲಿ ಮಹಜರ್ ಕ್ರಮ ಜರುಗಿಸಿ ಖಾತೆ ಮಾಡಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ. ಮಹಜರ್‌ನಲ್ಲಿ ಮತ್ತು ಸಾಮಾನ್ಯ ಸಭೆಯ ನಡಾವಳಿಯಲ್ಲಿ ಪೂ.ಪ.30 ಮತ್ತು ಉ.ದ.40 ಅಡಿಗಳೆಂದು ನಮೂದಿಸಿರುತ್ತಾರೆ. ಆದರೆ ಹೌಸ್‌ಲಿಸ್ಟ್‌ನಲ್ಲಿ ಬೇವಿನ ಮರ ಮತ್ತು ಸೀಗೇ ಮರ ಇರುವುದನ್ನು ಪ್ರಸ್ತಾಪಿಸಿರುವುದಿಲ್ಲ.

ix. ದೂರಿನಲ್ಲಿ ದಾಖಲಿಸಿರುವ ಖಾತೆ ಸಂ.6 ರ ಬಗ್ಗೆ ಪರಿಶೀಲಿಸಿದಾಗ ಸದರಿ ಖಾತೆಯು ನಾರಾಯಣಸ್ವಾಮಿ ಬಿನ್ ಮುನಿನಾಸಪ್ಪ ರವರ ಹೆಸರಿನಲ್ಲಿದ್ದು, ಮನೆ ಮತ್ತು ಖಾಲಿಜಾಗ ಇರುತ್ತದೆ. ಇದಕ್ಕೆ ಚೆಕ್ಕುಬಂದಿ ಪೂರ್ವಕ್ಕೆ-ಕೃಷ್ಣಪ್ಪ ವಗ್ಯೆರೆ, ಪಶ್ಚಿಮಕ್ಕೆ-ನಂಜಣ್ಣನವರ ನಂಜುಂಡಪ್ಪ, ಉತ್ತರಕ್ಕೆ-ಗ್ರಾಮಠಾಣಾ ಮತ್ತು ದಕ್ಷಿಣಕ್ಕೆ-ಬಿಸಿಲಹಳ್ಳಿ ಗೋಪಾಲಪ್ಪ ಇದ್ದು ಹೌಸ್‌ಲಿಸ್ಟ್‌ನಲ್ಲಿ ಪೂ.ಪ.185 ಉ.ದ.65 ಅಡಿಗಳು ಎಂಬುದಾಗಿರುತ್ತದೆ. 105 ನ್ನು 185 ಎಂಬುದಾಗಿ ತಿದ್ದಿ ಬರೆದಿರುವುದು ಕಂಡುಬಂದಿರುತ್ತದೆ. ಆ ಅವಧಿಯಲ್ಲಿ ಆರ್.ನಾಗರಾಜ ಕಾರ್ಯದರ್ಶಿ ನಿವೃತ್ತಿ ಇವರು ಹಾಗೂ ಅಧ್ಯಕ್ಷರಾದ ಶ್ರೀ.ಎಂ.ವೆಂಕಟರೆಡ್ಡಿ ರವರು ಸಹಿ ಮಾಡಿರುವುದು ಕಂಡುಬಂದಿರುತ್ತದೆ.

ಸದರಿ ನಾರಾಯಣಸ್ವಾಮಿ ಬಿನ್ ಮುನಿನಾಸಪ್ಪ ರವರ ಕ್ರಯಪತ್ರವನ್ನು ಪರಿಶೀಲಿಸಿದಾಗ ಕ್ರಯಪತ್ರದಲ್ಲಿ ಖಾತೆ ಸಂ.111 ಎಂಬುದಾಗಿದ್ದು ಹೌಸ್‌ಲಿಸ್ಟ್‌ನಲ್ಲಿ ಖಾತೆ ಸಂ.6 ಎಂಬುದಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಸ್ಥಳ ಪರಿಶೀಲನಾ ಸಮಯದಲ್ಲಿ ತಿಳಿಸಿರುತ್ತಾರೆ. ಕ್ರಯಪತ್ರದಲ್ಲಿಯೂ ಸಹ ಪೂ.ಪ.65 ಉ.ದ.135 ಎಂಬುದಾಗಿರುತ್ತದೆ. ಆದರೆ ಗ್ರಾಮಪಂಚಾಯಿತಿಯಲ್ಲಿ ಹೌಸ್‌ಲಿಸ್ಟ್‌ನಲ್ಲಿ ಹಾಗೂ ದಿ.13/8/2007 ರಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಉ.ದ.135 ನ್ನು 185 ಎಂಬುದಾಗಿ ತಿದ್ದಿರುವುದು ಅಂದಿನ ಗ್ರಾಮಪಂಚಾಯಿತಿ ಕಾರ್ಯದರ್ಶಿ ಕೆ.ಬಿ.ನಾಗೇಶ್‌ಬಾಬು ಹಾಗೂ ಅಧ್ಯಕ್ಷರಾದ ಹೆಚ್.ಸಿ.ಅಂಜಪ್ಪ ರವರು ನಡಾವಳಿಯಲ್ಲಿ ತೀರ್ಮಾನಿಸಿ ಸಹಿ ಮಾಡಿರುವುದು ಕಂಡುಬಂದಿರುತ್ತದೆ. ಮೂಲತಃ 135 ಎಂದು ನಮೂದಿಸಿರುತ್ತಾರೆ. ಆನಂತರ 135 ನ್ನು 185 ಎಂದು ತಿದ್ದಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

7. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಂತಾಮಣಿ ಇವರ ವರದಿಯನ್ನು ಪರಿಶೀಲಿಸಿದಾಗ, ಹೌಸ್‌ಲಿಸ್ಟ್ ನಂ.105 ನ್ನು 185 ಎಂಬುದಾಗಿ ತಿದ್ದಿ ಬರೆದಿದ್ದು, ಆ ಸಮಯದಲ್ಲಿ ಆರ್.ನಾಗರಾಜ್, ಕಾರ್ಯದರ್ಶಿಯಾಗಿ ಮತ್ತು ಎಂ.ವೆಂಕಟರೆಡ್ಡಿ ಅಧ್ಯಕ್ಷರಾಗಿ ಸಹಿ ಮಾಡಿರುತ್ತಾರೆ. ಅದೇರೀತಿ ಗ್ರಾಮಪಂಚಾಯಿತಿಯಲ್ಲಿ ಹೌಸ್‌ಲಿಸ್ಟ್‌ನಲ್ಲಿ ಹಾಗೂ ದಿ.13/8/2007 ರಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಉ.ದ.-135 ನ್ನು 185 ಎಂಬುದಾಗಿ ತಿದ್ದಿರುವುದು ಅಂದಿನ ಗ್ರಾಮಪಂಚಾಯಿತಿ ಕಾರ್ಯದರ್ಶಿ ಕೆ.ಬಿ.ನಾಗೇಶ್‌ಬಾಬು ಹಾಗೂ ಅಧ್ಯಕ್ಷರಾದ ಹೆಚ್.ಸಿ.ಅಂಜಪ್ಪ

ಎಂದು ವರದಿ ನೀಡಿರುವುದು ಕಂಡುಬರುತ್ತದೆ. ಆದ್ದರಿಂದ, ಈ ಪ್ರಕರಣದಲ್ಲಿ ಆರ್.ನಾಗರಾಜ್, ಎಂ.ವೆಂಕಟರೆಡ್ಡಿ ಮತ್ತು ಹೆಚ್.ಸಿ.ಆಂಜಪ್ಪ ಇವರುಗಳನ್ನು ಪಕ್ಷಗಾರರನ್ನಾಗಿ ಮಾಡಿ ಆಕ್ಷೇಪಣೆಯನ್ನು ಸಲ್ಲಿಸುವಂತೆ ಆದೇಶಿಸಲಾಗಿತ್ತು.

8. 2 ರಿಂದ 4ನೇ ಎದುರುದಾರರಿಗೆ ನೋಟೀಸು ಜಾರಿಯಾದರೂ ಸಹ ಅವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

9. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಂತಾಮಣಿ ಇವರ ವರದಿಯನ್ನು ಪರಿಶೀಲಿಸಿದಾಗ, ಹೌಸ್‌ಲಿಸ್ಟ್ ನಂ.105 ನ್ನು 185 ಎಂಬುದಾಗಿ ತಿದ್ದಿ ಬರೆದಿದ್ದು, ಆ ಸಮಯದಲ್ಲಿ ಆರ್.ನಾಗರಾಜ್, ಕಾರ್ಯದರ್ಶಿಯಾಗಿ ಮತ್ತು ಎಂ.ವೆಂಕಟರೆಡ್ಡಿ ಅಧ್ಯಕ್ಷರಾಗಿ ಸಹಿ ಮಾಡಿರುತ್ತಾರೆ. ಅದೇರೀತಿ ಗ್ರಾಮಪಂಚಾಯಿತಿಯಲ್ಲಿ ಹೌಸ್‌ಲಿಸ್ಟ್‌ನಲ್ಲಿ ಹಾಗೂ ದಿ.13/8/2007 ರಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಉ.ದ.–135 ನ್ನು 185 ಎಂಬುದಾಗಿ ತಿದ್ದಿರುವುದು ಅಂದಿನ ಗ್ರಾಮಪಂಚಾಯಿತಿ ಕಾರ್ಯದರ್ಶಿ ಕೆ.ಬಿ.ನಾಗೇಶ್‌ಬಾಬು ಹಾಗೂ ಅಧ್ಯಕ್ಷರಾದ ಹೆಚ್.ಸಿ.ಅಂಜಪ್ಪ ಎಂದು ವರದಿ ನೀಡಿರುವುದು ಕಂಡುಬರುತ್ತದೆ. ವರದಿಯ ಜೊತೆ ಕಾರ್ಯನಿರ್ವಾಹಕ ಅಧಿಕಾರಿ ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ದಿ.22/12/17 ರಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಚಿಂತಾಮಣಿ ಇವರು 1ನೇ ಎದುರುದಾರರಿಗೆ ಎಚ್ಚರಿಕೆಯ ನೋಟೀಸನ್ನು ನೀಡಿರುವುದು ಕಂಡುಬರುತ್ತಿದ್ದು, ಸದರಿ ಎಚ್ಚರಿಕೆಯ ನೋಟೀಸಿನಲ್ಲಿ ನಿಯಮಬಾಹಿರವಾಗಿ ತಿದ್ದುಪಡಿ ಮಾಡಲಾಗಿದೆಯೆಂದು ಉಲ್ಲೇಖಿಸಿರುವುದು ಕಂಡುಬರುತ್ತದೆ. ಅದನ್ನು ಗಮನಿಸಿದಾಗ ನಿಯಮಬಾಹಿರವಾಗಿ ಮೂಲ ದಾಖಲೆಯಲ್ಲಿ ತಿದ್ದುಪಡಿ ಮಾಡಿರುವ ಅಂಶ ಕಂಡುಬರುತ್ತದೆ. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಚಿಂತಾಮಣಿ ಇವರು ದಿ.17/7/17 ರಂದು ಸಲ್ಲಿಸಿರುವ ವರದಿಯಲ್ಲಿ ಹೌಸ್‌ಲಿಸ್ಟ್ ನಂ.105 ನ್ನು 185 ಎಂಬುದಾಗಿ ತಿದ್ದಿದ ಸಮಯದಲ್ಲಿ ಆರ್.ನಾಗರಾಜ್ ಎನ್ನುವವರು ಕಾರ್ಯದರ್ಶಿಯಾಗಿದ್ದು, ಎಂ.ವೆಂಕಟರೆಡ್ಡಿ ಎನ್ನುವವರು ಅಧ್ಯಕ್ಷರಾಗಿ ಸಹಿ ಮಾಡಿರುತ್ತಾರೆ ಹಾಗೂ ಸಾಮಾನ್ಯ ಸಭೆಯಲ್ಲಿ ತಿದ್ದುಪಡಿ ಮಾಡಿರುವುದು ಶ್ರೀ.ಕೆ.ಬಿ.ನಾಗೇಶ್‌ಬಾಬು ಹಾಗೂ ಅಧ್ಯಕ್ಷರಾದ ಶ್ರೀ.ಎನ್.ಸಿ.ಅಂಜಪ್ಪ ಎಂಬುವರು ತಿದ್ದುಪಡಿ ಮಾಡಿರುವ ಬಗ್ಗೆ ವರದಿಯಲ್ಲಿ ತಿಳಿಸಿದ್ದು, ಆದರೆ 1ನೇ ಎದುರುದಾರರನ್ನು ಹೊರತುಪಡಿಸಿ ಇತರರ ವಿರುದ್ಧ ಯಾವುದೇ ಕ್ರಮವನ್ನು ಕೈಗೊಂಡಿರುವುದು ಕಂಡುಬರುತ್ತಿಲ್ಲ. ಖಾತಾ ಬದಲಾವಣೆಯನ್ನು ಅಥವಾ ತಿದ್ದುಪಡಿಯನ್ನು ಪಂಚಾಯಿತಿ ನಿರ್ಣಯದಂತೆ ಮಾಡಿದರೂ ಸಹ ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಸ್ಪಷ್ಟವಾದ ನಿರ್ಣಯ ಹಾಗೂ ಯಾವ ನಿರ್ಣಯದ ಅನುಗುಣವಾಗಿ ತಿದ್ದುಪಡಿಯನ್ನು ಮಾಡಲಾಗಿರುತ್ತದೆ ಎನ್ನುವುದನ್ನು ನಮೂದಿಸಬೇಕಾಗುತ್ತದೆ. ಆದರೆ, ಕಾರ್ಯನಿರ್ವಾಹಕ ಅಧಿಕಾರಿಗಳ ವರದಿಯನ್ನು ಪರಿಶೀಲಿಸಿದಾಗ, ಯಾವುದೇ ನಿರ್ಣಯಗಳ ಬಗ್ಗೆ ನಮೂದು ಮಾಡದೆ ಸಾಮಾನ್ಯ ರೀತಿಯಲ್ಲಿ ತಿದ್ದುಪಡಿ ಮಾಡಿ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಕಂಡುಬರುತ್ತದೆ. ಆದ್ದರಿಂದ, 1 ರಿಂದ 4ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯಸ್ಥರಾಗಿರುತ್ತಾರೆ.

10. 1 ಮತ್ತು 2ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, 1 ಮತ್ತು 2ನೇ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಹಾಗೂ **2ನೇ ಎದುರುದಾರರಾದ ಶ್ರೀ.ಆರ್.ನಾಗರಾಜ್ ಇವರು ನಿವೃತ್ತಿಯಾಗಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(i) ರಂತೆ ಸರ್ಕಾರದ ಅನುಮತಿಯೊಂದಿಗೆ** ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11. 3 ಮತ್ತು 4ನೇ ಎದುರುದಾರರು ಜನಪ್ರತಿನಿಧಿಯಾಗಿದ್ದು, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43ಎ ರನ್ವಯ ಸೂಕ್ತ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್.ಆನಂದ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.